# ಸಾಮಾಜಿಕ ಜಾಲತಾಣಗಳು ಮತ್ತು ವಸಾಹತೋತ್ತರ ಸಾಹಿತ್ಯದ ಅಂತರ್ ಸಂಬಂಧ

**ರಾಮರೆಡ್ಡಿ ಕೆ.**

ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ, ಕೆ.ಎಲ್.ಇ. ಸಂಸ್ಥೆಯ, ಎಸ್.ವಿ.ಎಸ್. ಬೆಳ್ಳುಬ್ಬಿ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಸವದತ್ತಿ, ಬೆಳಗಾವಿ.

**DOI: https://doi.org/10.5281/zenodo.18699326**

## ABSTRACT:

ಅನ್ವೇಷಣಾ ಬುದ್ಧಿಯನ್ನು ಹೊಂದಿದ ಮಾನವನ ದೃಷ್ಟಿಕೋನ ಅವನು ಕಲ್ಪಿಸಿಕೊಳ್ಳುವ ಸಂಗತಿಗಳನ್ನೆಲ್ಲ ಸಾಕಾರಗೊಳ್ಳುವಷ್ಟರ ಮಟ್ಟಿಗೆ ಇಂದು ತಾಂತ್ರಿಕವಾಗಿ ಬೆಳೆದಿದ್ದೇವೆ ಮತ್ತು ಮುಂದೆಯೂ ಬೆಳೆಯುತ್ತಿದ್ದೇವೆ. ಹೀಗಾಗಿ ಇಂದು ಸಾಮಾಜಿಕ ಜಾಲತಾಣಗಳು ಮಾನವ ಸಮುದಾಯವನ್ನು ಬಹುತೇಕ ಆಕ್ರಮಿಸಿಕೊಂಡಿದೆ. ಇದು ಮಾನವನ ಬದುಕಿನಲ್ಲಿ ಮಹತ್ತರವಾದ ಬದಲಾವಣೆಯನ್ನು ತಂದಿದೆ. ಇದಕ್ಕೆಲ್ಲ ಕಾರಣ ಪ್ರಪಂಚದ ಎಲ್ಲ ದೇಶ ದೇಶಗಳೊಡನೆ ಬೆಸೆದಿರುವ ಅಂತರಾಷ್ಟ್ರೀಯ ಸಂಬಂಧಗಳು ಮತ್ತು ವಿಜ್ಞಾನ-ತಂತ್ರಜ್ಞಾನದ ಬೆಳವಣಿಗೆಯೇ ಕಾರಣ. 1990ರ ನಂತರ ಜಾರಿಗೊಂಡ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣವು ಭಾರತದಲ್ಲಿ ನವ ಮನ್ವಂತರವನ್ನು ಸೃಷ್ಟಿಸಿದೆ. ಇದು ಪ್ರಪಂಚದ ಎಲ್ಲ ದೇಶಗಳೊಡನೆ ಕೊಳುಕೊಡೆ ಸಂಬಂಧವನ್ನು ಗಟ್ಟಿಗೊಳಿಸಿದೆ.

ಹದಿನೈದನೇ ಶತಮಾನದಲ್ಲಿ ಭಾರತಕ್ಕೆ ವ್ಯಾಪಾರಕ್ಕಾಗಿ ಬಂದ ಪೋರ್ಚುಗೀಸರಿಂದ ಹಿಡಿದು ಬ್ರಿಟಿಷರವರೆಗೆ ವಸಾಹತುಶಾಹಿ ಕಾಲವೆಂದು ಕರೆದರೆ, ಸ್ವಾತಂತ್ರ್ಯ ನಂತರದ ಕಾಲವನ್ನು ವಸಾಹತೋತ್ತರ ಕಾಲವೆಂದು ಕರೆಯಲಾಗುತ್ತದೆ. ಪಾಶ್ಚಾತ್ಯರು ನಮ್ಮ ದೇಶದಲ್ಲಿ ವ್ಯಾಪಾರದೊಂದಿಗೆ ಶಿಕ್ಷಣ, ಸಾಹಿತ್ಯ, ಆಡಳಿತ, ತಂತ್ರಜ್ಞಾನವನ್ನು ಪರಿಚಯಿಸಿದರು. ಹಾಗಂತ ನಮ್ಮಲ್ಲಿ ತಂತ್ರಜ್ಞಾನ ಬೆಳೆದಿರಲಿಲ್ಲ ಅಂತಲ್ಲ. ಇದು ಭಾರತದಂತಹ ಬಹುಭಾಷಿಕ, ಬಹುಧಾರ್ಮಿಕ ದೇಶದಲ್ಲಿ ಸಾಕಷ್ಟು ಬದಲಾವಣೆಯನ್ನು ತಂದಿತು. ಶಿಕ್ಷಣವು ಮಾನವನ ಬದುಕನ್ನೇ ಬದಲಿಸಿದರೆ, ತಂತ್ರಜ್ಞಾನವು ಅಭಿವೃದ್ಧಿಯ ಪಥವನ್ನು ರೂಪಿಸಿತು. ರೈಲು, ವಿದ್ಯುತ್, ಕೈಗಾರಿಕೆ, ಸಾರಿಗೆ, ದೂರವಾಣಿಯಂತಹ ತಾಂತ್ರಿಕತೆಗಳು ಹೊಸ ಕ್ರಾಂತಿಯನ್ನುಂಟುಮಾಡಿದವು. ಇದರ ಪರಿಣಾಮವಾಗಿ ಸಾಹಿತ್ಯದಲ್ಲಿ ಹೊಸ ರಚನೆಗಳು ಕಾಣಿಸಿಕೊಂಡವು. ಬಿ.ಎಂ.ಶ್ರೀಯವರ ಇಂಗ್ಲಿಷ್ ಗೀತಗಳಿಂದ ಇತ್ತೀಚಿನ ಬೂಕರ್ ಪ್ರಶಸ್ತಿ ಪಡೆದ ಬಾನು ಮುಷ್ತಾಕ್ ಅವರ ಎದೆಯ ಹಣತೆಯವರೆಗೆ ಕನ್ನಡ ಸಾಹಿತ್ಯವು ಸಮೃದ್ಧ ಫಸಲನ್ನು ಕಂಡಿದೆ.

ಇಂದು ತಂತ್ರಜ್ಞಾನವು ಮನುಷ್ಯನ ಆಲೋಚನೆಯನ್ನು ಕ್ಷಣ ಕ್ಷಣದಲ್ಲಿ ಸಮಾಜದಲ್ಲಿ ಬಿತ್ತರಿಸಲು ಸಾಧ್ಯಮಾಡಿದೆ. ಹೀಗಾಗಿ ಈ ಲೇಖನದಲ್ಲಿ ತಂತ್ರಜ್ಞಾನಾಧಾರಿತವಾದ ಸಾಮಾಜಿಕ ಜಾಲತಾಣಗಳು ಮತ್ತು ವಸಾಹತೋತ್ತರ ಕಾಲಘಟ್ಟದಲ್ಲಿ ರಚನೆಯಾದ ಸಾಹಿತ್ಯವು ಹೇಗೆ ಮಿಳಿತಗೊಂಡಿದೆ ಎನ್ನುವುದನ್ನು ಚರ್ಚಿಸಲಾಗಿದೆ. ಪ್ರಧಾನವಾಗಿ ಫೇಸ್‌ಬುಕ್, ವಾಟ್ಸಪ್ ಮತ್ತು ಬ್ಲಾಗ್‌ಗಳಲ್ಲಿ ಸೃಷ್ಟಿಯಾಗುತ್ತಿರುವ ಸಾಹಿತ್ಯವನ್ನು ಗಮನಿಸಲಾಗಿದೆ.

## KEYWORDS:

ಕನ್ನಡ ಸಾಹಿತ್ಯ, ಸಾಮಾಜಿಕ ಜಾಲತಾಣ, ವಸಾಹತುಶಾಹಿ, ವಸಾಹತೋತ್ತರ ಸಾಹಿತ್ಯ.

**ಪೀಠಿಕೆ:** ಆದಿಮ ಕಾಲದಲ್ಲಿ ಮಾನವನು ಒಬ್ಬರಿಂದ ಇನ್ನೊಬ್ಬರು ಸಂಪರ್ಕ ಮಾಡುವುದಕ್ಕಾಗಿ ಹರಸಾಹಸಪಡುತ್ತಿದ್ದನು. ನಾಗರಿಕತೆ ಬೆಳೆದಂತೆ ಮತ್ತು ಅವನ ಬುದ್ಧಿ ವಿಕಾಸವಾದಂತೆ ಭೂಮಿಯ ಮೇಲೆ ಹಲವು ಬಗೆಯ ವಿಜ್ಞಾನ ತಂತ್ರಜ್ಞಾನಗಳ ಬೆಳವಣಿಗೆಗಳಾದವು. ಹಕ್ಕಿಯನ್ನು ನೋಡಿ ವಿಮಾನವನ್ನು, ಜಲಚರಗಳನ್ನು ನೋಡಿ ಹಡಗನ್ನು, ಬಹು ದೂರದಲ್ಲಿದ್ದವರಿಗೆ ಇಲ್ಲಿಂದಲೇ ಮಾತನಾಡಬೇಕು, ಅವರು ದೂರದಲ್ಲಿದ್ದರೂ ಎದುರು ಬದುರಾಗಿ ಮಾತನಾಡುವಂತಿರಬೇಕೆಂದು ತನ್ನದೇ ಕಲ್ಪನಾ ಲೋಕದಲ್ಲಿ ಕಲ್ಪಿಸಿಕೊಂಡ.

ಅದರ ಫಲವೇ ರೇಡಿಯೋ, ಪತ್ರಿಕೆ, ಟಿ.ವಿ., ಟೆಲಿಫೋನ್, ಟೆಲಿಗ್ರಾಮ್, ಪೇಜರ್, ಕಂಪ್ಯೂಟರ್, ಮೊಬೈಲ್ ಇಷ್ಟು ಸಾಲದೆಂಬಂತೆ ಅಂತರ್ಜಾಲದಂತಹ ಆವಿಷ್ಕಾರಗಳುಂಟಾದವು. ಇವುಗಳಲ್ಲಿ ಕೆಲವನ್ನು ಮೊದಲು ಸಮೂಹ ಮಾಧ್ಯಮಗಳೆಂದು ಕರೆದರೆ, ನಂತರದಲ್ಲಿ ಬಂದ ನವ ಮಾಧ್ಯಮಗಳಾದ 'ಇಮೇಲ್, ಬ್ಲಾಗ್, ಫೇಸ್‌ಬುಕ್, ವಾಟ್ಸಾಪ್, ಟೆಲಿಗ್ರಾಮ್, ಇನ್‌ಸ್ಟಾಗ್ರಾಮ್, ಟ್ವಿಟರ್, ಯೂಟ್ಯೂಬ್, ಲಿಂಕ್ಡ್‌ಇನ್, ರೀಲ್ಸ್ ಮುಂತಾದವು ಸಾಮಾಜಿಕ ಜಾಲತಾಣಗಳೆಂದು ಕರೆಯಲಾಗುತ್ತಿದೆ. ಈ ವೇದಿಕೆಗಳು ಮಾನವನ ಭಾವನೆಗಳನ್ನು ಅಭಿವ್ಯಕ್ತಿಸಲು ಸುಲಭವಾಗಿಸಿವೆ. ಇದರ ಪರಿಣಾಮವಾಗಿ ಸಾಹಿತ್ಯವೂ ಇದರೊಟ್ಟಿಗೆ ಬೆಳೆದಿದೆ ಮತ್ತೆ ಬೆಳೆಯುತ್ತಿದೆ. ಇವುಗಳ ಫಲಿತದಿಂದ ಇಂದು ಜಗತ್ತೇ ಒಂದು ಪುಟ್ಟ ಗ್ರಾಮವಾಗಿ ಪರಿಣಮಿಸಿದೆ.

ಹಿಂದೊಮ್ಮೆ ನಾವುಗಳು ಬಂಧುಗಳಿಗೆ ಕ್ಷೇಮವಾಗಿದ್ದೀರಾ? ಎಂದು ಕೇಳಲು ಅಥವಾ ಅವರ ಯೋಗಕ್ಷೇಮದ ಬಗ್ಗೆ ತಿಳಿಯಲು ಬಹಳಷ್ಟು ಸಮಯ ತಗುಲುತ್ತಿತ್ತು. ಪತ್ರ ಬರೆಯುವುದರ ಮೂಲಕ ಮಾಹಿತಿ ರವಾನೆಯಾಗುತ್ತಿತ್ತು. ಆದರೆ ಇಂದು ಕ್ಷಣಾರ್ಧದಲ್ಲಿ ಸಂಪರ್ಕಿಸಲು ಸಾಧ್ಯವಾಗಿದೆ. ಅದುವೇ ಸಾಮಾಜಿಕ ಜಾಲತಾಣಗಳು. ಈ ಅಂತರ್ಜಾಲ ಆಧಾರಿತ ಸಾಮಾಜಿಕ ಜಾಲತಾಣಗಳ ವೇದಿಕೆಗಳು ಸೃಜನಶೀಲ ರಚನೆಗಳ ಅಭಿವ್ಯಕ್ತಿಗೆ ಬಳಕೆಯಾಗುತ್ತಿವೆ. ಇವೆಲ್ಲವೂ ಪರಸ್ಪರ ಸಂಪರ್ಕ ಸಾಧಿಸಲು, ಮಾಹಿತಿ ವಿನಿಮಯ ಮಾಡಿಕೊಳ್ಳಲು, ಅಭಿಪ್ರಾಯ ಹಂಚಿಕೊಳ್ಳಲು ಬಳಸುವ ಪ್ರಮುಖ ಡಿಜಿಟಲ್ ವೇದಿಕೆಗಳಾಗಿವೆ. ಇವುಗಳು ಜಾಗತಿಕ ಸಂಪರ್ಕ, ಶಿಕ್ಷಣ, ವಾಣಿಜ್ಯ ಮತ್ತು ಮನರಂಜನೆಗೆ ವೇದಿಕೆಯಾಗಿ ಕಾರ್ಯ ನಿರ್ವಹಿಸುತ್ತಿವೆ.

ವಸಾಹತು ಎಂದರೆ 'ಒಂದು ಬಲಿಷ್ಠ ದೇಶವು ಮತ್ತೊಂದು ದುರ್ಬಲ ದೇಶ ಅಥವಾ ಪ್ರದೇಶದ ಮೇಲೆ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ನಿಯಂತ್ರಣ ಸಾಧಿಸಿ, ಅಲ್ಲಿನ ಸಂಪನ್ಮೂಲಗಳನ್ನು ತನ್ನ ಸ್ವಾರ್ಥಕ್ಕಾಗಿ ಬಳಸಿಕೊಳ್ಳುವ ಪ್ರಕ್ರಿಯೆ. ಇದು ವಿದೇಶಿ ಆಳ್ವಿಕೆ, ಸಾಂಸ್ಕೃತಿಕ ಹೇರಿಕೆ ಮತ್ತು ಸ್ಥಳೀಯರ ಶೋಷಣೆಯನ್ನು ಒಳಗೊಂಡಿರುತ್ತದೆ.' ಉದಾಹರಣೆಗೆ ಬ್ರಿಟಿಷರು ಭಾರತವನ್ನು ಆಳಿದ್ದು ಈ ವಸಾಹತುಶಾಹಿಯ ಆಳ್ವಿಕೆಯೇ ಆಗಿದೆ. ವಸಾಹತು ಎನ್ನುವ ಪದವು 'ಲ್ಯಾಟಿನ್ ಪದವಾದ ಕೊಲೊನಿಯಾದಿಂದ ಬಂದಿದೆ. ಇದರ ಮೂಲ ಪದವಾದ ಕೋಲೆರೆಯಿಂದ (ಅಂದರೆ ಕೃಷಿ ಮಾಡಲು, ಉಳುಮೆ ಮಾಡಲು) ಬಂದಿದೆ.' ಐತಿಹಾಸಿಕವಾಗಿ ಕ್ರಿ.ಶ. 15ರಿಂದ 20ನೆಯ ಶತಮಾನದವರೆಗೆ ಯೂರೋಪಿಯನ್ ರಾಷ್ಟ್ರಗಳು ಪ್ರಪಂಚದಾದ್ಯಂತ ತಮ್ಮ ವಸಾಹತುಗಳನ್ನು ಸ್ಥಾಪಿಸಿದ್ದವು. ಅವುಗಳಲ್ಲಿ ಫ್ರೆಂಚರು, ಡಚ್ಚರು, ಯೂರೋಪಿಯನ್ನರು, ಬ್ರಿಟಿಷರು ವ್ಯಾಪಾರವನ್ನೇ ತಮ್ಮ ಪ್ರಮುಖ ನೆಪವನ್ನಾಗಿಟ್ಟುಕೊಂಡು ಪ್ರಪಂಚದಾದ್ಯಂತ ವಲಸೆ ಬಂದರು. ತದನಂತರದಲ್ಲಿ ಸ್ಥಳೀಯ ಆಡಳಿತವನ್ನೇ ತಮ್ಮ ವಶಮಾಡಿಕೊಂಡು ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ

ನಿಯಂತ್ರಣ ಸಾಧಿಸಿ ಆಳ್ವಿಕೆ ನಡೆಸಿದವು. 'ಫ್ರೆಂಚ್ ಸಾಮ್ರಾಜ್ಯವು ಯೂರೋಪಿನ ಗಾತ್ರಕ್ಕಿಂತ ದೊಡ್ಡ ಪ್ರದೇಶವನ್ನು ಆಳಿತು. ಆದರೆ ಈ ಡೊಮೇನ್‌ಗಳಲ್ಲಿ ದೊಡ್ಡದು ಬ್ರಿಟಿಷ್ ಸಾಮ್ರಾಜ್ಯ. ಅದು ತನ್ನ ಉತ್ತುಂಗದಲ್ಲಿದ್ದಾಗ ಪ್ರಪಂಚದ ಕಾಲುಭಾಗವನ್ನು ಆವರಿಸಿತ್ತು. ಅದರ ವ್ಯಾಪ್ತಿಯಲ್ಲಿರುವ ಯಾವುದಾದರೂ ಒಂದು ವಸಾಹತುಗಳಲ್ಲಿ ಸೂರ್ಯ ಬೆಳಗುತ್ತಿದ್ದ ಅಲ್ಲಿ ಹಗಲಿರುತ್ತಿತ್ತು. ಇದರಿಂದಾಗಿ ಬ್ರಿಟಿಷ್ ಸಾಮ್ರಾಜ್ಯವನ್ನು ಸೂರ್ಯ ಮುಳುಗದ ಸಾಮ್ರಾಜ್ಯವೆಂದು ಕರೆಯಲಾಗುತ್ತಿದೆ. ಭಾರತವು ಬ್ರಿಟನ್ನಿನ ಪ್ರಮುಖ ವಸಾಹತು ಪ್ರದೇಶವಾಗಿತ್ತು. ಇದರಿಂದಾಗಿ ಅನೇಕ ಬಡರಾಷ್ಟ್ರಗಳು ಈ ವಸಾಹತುಶಾಹಿ ಅಡಿಯಲ್ಲಿ ಆಮೂಲಾಗ್ರವಾಗಿ ನರಳಿದವು. ಕಾಲಾನುಕ್ರಮದಲ್ಲಿ ಶೋಷಣೆಗೆ ಒಳಗಾದ ದೇಶವಾದ ಭಾರತವು ಈ ವಸಾಹತುಶಾಹಿ ವಿರುದ್ಧ ಹೋರಾಡಿ ಕೊನೆಗೆ ಸ್ವಾತಂತ್ರ್ಯವನ್ನು ಪಡೆದುಕೊಂಡಿತು. ಈ ವಸಾಹತುಶಾಹಿ ದೇಶವನ್ನು ಬಿಟ್ಟು ಹೋದ ನಂತರದ ಕಾಲಾವಧಿಯನ್ನು ವಸಾಹತ್ತೋತ್ತರ ಕಾಲವೆಂದು ಕರೆಯಲಾಗುತ್ತದೆ. ಈ ಕಾಲಘಟ್ಟದಲ್ಲಿ ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ವಸಾಹತು ಕಾಲದ ಪ್ರಭಾವವನ್ನು ಕಾಣಬಹುದು. ಈ ಕಾಲಘಟ್ಟದಲ್ಲಿ ರೂಪುಗೊಂಡ ಸಾಹಿತ್ಯಿಕ ಫಲಿತಗಳು ಹೊಸದೊಂದು ಕಾಲಘಟ್ಟವನ್ನೇ ಸೃಷ್ಟಿಸಿದೆ.

ಅಧ್ಯಯನ ದೃಷ್ಟಿಯಿಂದ ಸಾಹಿತ್ಯವನ್ನು ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡವೆಂದು ವಿಭಾಗೀಕರಿಸಲಾಗಿದೆ. ಹೊಸಗನ್ನಡದಲ್ಲೂ ನವೋದಯ, ಪ್ರಗತಿಶೀಲ, ನವ್ಯ ಮತ್ತು ದಲಿತ ಬಂಡಾಯವೆಂದು ವಿಭಾಗೀಕರಿಸಲಾಗಿದೆ. ತೊಂಭತ್ತರ ದಶಕದಿಂದ ಜಾಗತಿಕ ಮಟ್ಟದಲ್ಲಿ ಉಂಟಾದ ಬದಲಾವಣೆಯ ಗಾಳಿ ಸಾಹಿತ್ಯ ಲೋಕವನ್ನು ಪ್ರಭಾವಿಸಿತು. ಮೊಳೆಗಳ ಸಹಾಯದಿಂದ ಮುದ್ರಣ ಯಂತ್ರದಲ್ಲಿ ಮುದ್ರಣಗೊಳ್ಳುತ್ತಿದ್ದ ಸಾಹಿತ್ಯಕೃತಿಗಳು ಮುಂದೆ ಕಂಪ್ಯೂಟರ್ ಆಗಮನದಿಂದ ಮುದ್ರಣದ ಸಾಧ್ಯತೆಯನ್ನು ಮತ್ತಷ್ಟು ಸುಲಭವಾಗಿಸಿತು. ಅದರಲ್ಲೂ ಮೊಬೈಲ್ ಮತ್ತು ಅಂತರ್ಜಾಲ ಬಂದ ನಂತರವಂತೂ ಅಭಿವ್ಯಕ್ತಿಯ ವೇಗ ಮನಸ್ಸಿನ ಆಲೋಚನೆಯ ವೇಗದಷ್ಟೇ ನಾಗಾಲೋಟದಲ್ಲಿ ಚಲಿಸಲಾರಂಭಿಸಿತು. ವಸಾಹತ್ತೋತ್ತರ ಕಾಲದ ಸಾಹಿತ್ಯವನ್ನು ಇಂದು ಮುದ್ರಿತ ಹಾಳೆಗಳಲ್ಲಿ ಮಾತ್ರವಲ್ಲ, ಡಿಜಿಟಲ್ ತಂತ್ರಜ್ಞಾನದಲ್ಲಿ ಕಾಣುತ್ತಿದ್ದೇವೆ. 'ಇಮೇಲ್, ಬ್ಲಾಗ್, ಫೇಸ್‌ಬುಕ್, ವಾಟ್ಸಾಪ್, ಟೆಲಿಗ್ರಾಮ್, ಇನ್‌ಸ್ಟಾಗ್ರಾಮ್, ಟ್ವಿಟರ್, ಯೂಟ್ಯೂಬ್, ಇ-ಪುಸ್ತಕ, ಲಿಂಕ್ಡ್‌ಇನ್, ರೀಲ್ಸ್ ಮುಂತಾದವುಗಳಲ್ಲಿ ಮನುಷ್ಯನ ಸೃಜನಶೀಲ ರಚನೆಗಳನ್ನು ಅಭಿವ್ಯಕ್ತಪಡಿಸಲು ಸುಲಭವಾಗಿಸಿದೆ. ಬರಹ, ಚಿತ್ರ, ಧ್ವನಿ, ದೃಶ್ಯಾವಳಿ ಮುಂತಾದ ಡಿಜಿಟಲ್ ರೂಪದಲ್ಲಿಯೂ ಕಾಣಬಹುದಾಗಿದೆ. ಕೆಲವೊಮ್ಮೆ ಅಸಾಧ್ಯವಾದುದನ್ನು ಸಾಧ್ಯವಾದಂತೆ ತೋರಿಸುವ ಚಾಕಚಕ್ಯತೆ ಈ ತಾಂತ್ರಿಕತೆಗಳಲ್ಲಿ ಅಡಗಿದೆ.

ಸಾಮಾಜಿಕ ಜಾಲತಾಣಗಳು ಮತ್ತು ಸಾಹಿತ್ಯದ ಅಂತರ್ ಸಂಬಂಧ: ಯಾವುದೇ ಸೃಜನಶೀಲ ವ್ಯಕ್ತಿಯ ಬರವಣಿಗೆಗಳು ಇಮೇಲ್, ಫೇಸ್‌ಬುಕ್, ವಾಟ್ಸಾಪ್, ಟೆಲಿಗ್ರಾಮ್, ಇನ್‌ಸ್ಟಾಗ್ರಾಮ್, ಟ್ವಿಟರ್, ಲಿಂಕ್ಡ್‌ಇನ್‌ಗಳಲ್ಲಿ ಸೀಮಿತ ಪದಗಳಲ್ಲಿ ಎಲ್ಲರಿಗೂ ಹಂಚಿಕೊಳ್ಳಬಹುದು. ಇದಕ್ಕೆ ನಿರ್ದಿಷ್ಟತೆ ಇದೆ. ಆದರೆ ಬ್ಲಾಗ್‌ಗಳಿಗೆ ಇಂತಹ ನಿರ್ದಿಷ್ಟತೆ ಇಲ್ಲ.

**ಇಮೇಲ್:** ಈ ಮಾಧ್ಯಮವು ಫೋಟೋ ಮತ್ತು ಬರವಣಿಗೆಯನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳದಲ್ಲಿರುವ ವ್ಯಕ್ತಿಗೆ ಸುಲಭವಾಗಿ, ಡಿಜಿಟಲ್ ರೂಪದಲ್ಲಿ ಕ್ಷಣಾರ್ಧದಲ್ಲಿ ತಲುಪಿಸುವ ಒಂದು ತಂತ್ರಜ್ಞಾನ.

ಫೇಸ್‌ಬುಕ್, ವಾಟ್ಸಾಪ್, ಟೆಲಿಗ್ರಾಮ್, ಇನ್‌ಸ್ಟಾಗ್ರಾಮ್, ಟ್ವಿಟರ್, ಲಿಂಕ್ಡ್‌ಇನ್‌ಗಳಲ್ಲಿ: ಸೀಮಿತ ಬರಹ, ದೃಶ್ಯಾವಳಿ ಮತ್ತು ಛಾಯಾಚಿತ್ರವನ್ನು ಹಂಚಿಕೊಳ್ಳಲು ಬಳಸಿಕೊಳ್ಳಬಹುದು.

**ಬ್ಲಾಗ್:** ಇದು 1990ರ ದಶಕದ ಉತ್ತರಾರ್ಧದಲ್ಲಿ ರಚಿಸಲಾದ 'ವೆಬ್ಲಾಗ್'ನ ಸಂಕ್ಷಿಪ್ತ ಆವೃತ್ತಿಯಾಗಿದೆ. 1997ರಲ್ಲಿ ಜೋರ್ನ್ ಬಾರ್ಗರ್ ಎನ್ನುವವ 'ವೆಬ್ಲಾಗ್' ಎಂಬ ಪದವನ್ನು ಸೃಷ್ಟಿಸಿದ. ಮುಂದೆ 1999ರಲ್ಲಿ ಪೀಟರ್ ಮೆರ್ಹೋಲ್ಜ್ ಎನ್ನುವವ ಇದನ್ನು 'ಬ್ಲಾಗ್' ಎಂದು ಮೊಟಕುಗೊಳಿಸಿದ. ಆರಂಭದಲ್ಲಿ ಬ್ಲಾಗ್‌ಗಳು ವೈಯಕ್ತಿಕ ಸ್ವರೂಪದ್ದಾಗಿದ್ದವು ಮತ್ತು ವ್ಯಕ್ತಿಗಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಮತ್ತು ವಿಶಾಲ ಪ್ರೇಕ್ಷಕರೊಂದಿಗೆ ಹಂಚಿಕೊಳ್ಳಲು ವೇದಿಕೆಯಾಗಿ ಕಾರ್ಯನಿರ್ವಹಿಸಿದವು. ಇದರಲ್ಲಿ ವ್ಯಕ್ತಿಗಳು ಅಥವಾ ಸಂಸ್ಥೆಗಳು ತಮ್ಮ ಆಲೋಚನೆಗಳು, ಜ್ಞಾನ, ಮಾಹಿತಿ ಅಥವಾ ಅನುಭವಗಳನ್ನು ಲೇಖನ, ಗ್ರಾಫಿಕ್ಸ್, ವೀಡಿಯೋಗಳ ರೂಪದಲ್ಲಿ ನಿಯಮಿತವಾಗಿ ಹಂಚಿಕೊಳ್ಳಬಹುದು. ಈ ಬ್ಲಾಗ್ ಮೂಲಕ ಹೊಸ ತಲೆಮಾರಿನ ಬರಹಗಾರರು ಕಾಣಿಸಿಕೊಂಡರು. ಕೆಲವು ಹೊಸ ಬಗೆಯ ಸಾಹಿತ್ಯ ಪ್ರಕಾರಗಳು ಹುಟ್ಟಿಕೊಂಡವು.

**ಬ್ಲಾಗ್ ಬರಹಗಳು:**

ಕನ್ನಡ ಹೆಸರಿನ ಬ್ಲಾಗ್‌ಗಳು: ಕನ್ನಡ ಸೌರಭ, ಕನ್ನಡ ದೀವಿಗೆ, ನುಡಿಗನ್ನಡ, ಸಿರಿಗನ್ನಡ, ಕನ್ನಡತಿ, ಜ್ಞಾನ ದೀಪ, ಕೆಂಡ ಸಂಪಿಗೆ, ಚಿಲುಮೆ, ನಲುಮೆ, ನಿಲುಮೆ, ಅಗ್ನಿದಿವ್ಯ, ಕಣಜ ಸಂಚಯ, ಸಂಪದ, ಅವಧಿ, ಸಂಗಾತಿ, ಹೊನಲು, ಹೊಂಗಿರಣ ನೆರಳುಗಳ ಬೆನ್ನುಹತ್ತಿ, ಶಾಲ್ಮಲಾ ಮುಂತಾದ 900ಕ್ಕೂ ಹೆಚ್ಚು ಬ್ಲಾಗುಗಳು ಕಾರ್ಯನಿರ್ವಹಿಸುತ್ತಿವೆ. ಈ ಬ್ಲಾಗುಗಳಲ್ಲಿ ಕಥೆ, ಕವನ, ಪ್ರವಾಸದ ಅನುಭವ, ಪ್ರಬಂಧ, ಸಾಮಾನ್ಯ ಜ್ಞಾನ, ಶೈಕ್ಷಣಿಕ ಪಠ್ಯದ ಚರ್ಚೆ, ಪುಸ್ತಕ ಪರಿಚಯ ಮತ್ತು ವಿಮರ್ಶೆ, ಸಾಂಸ್ಕೃತಿಕ ಕಾರ್ಯಕ್ರಮಗಳ ಕುರಿತಾದ ವರದಿ, ಸಾಮಾಜಿಕ ಸಂಗತಿಗಳ ಕುರಿತಾದ ಚರ್ಚೆ ಮುಂತಾದವುಗಳನ್ನು ಬರೆಯಬಹುದು.

ಜಿ.ಪಿ. ಬಸವರಾಜು ಅವರ ಕವಿತೆ ಅವಧಿ ಬ್ಲಾಗಿನಲ್ಲಿ

**'ಉಸ್ತಾದರು ತೀರಿಹೋದ ಹೊತ್ತು'**

**ಉಸ್ತಾದರು ತೀರಿಹೋದ ಹೊತ್ತಲ್ಲಿ**
**ಹೊರ ಜಗತ್ತು ಹೇಗಿತ್ತು**
**ತಿಳಿಯಲಿಲ್ಲ, ಒಳಗಿದ್ದೆ ನಾನು**
**ಹನಿ ಹನಿ ತೊಟ್ಟಿಕ್ಕುತ್ತಿತ್ತು ಒಳಗೆ**
**ಎಲ್ಲರ ಕಣ್ಣುಗಳಲ್ಲಿ ಉಸ್ತಾದರ**
**ನೋವು ಮುಗಿದು ದಟ್ಟ ಮೋಡ**
**ಮುಚ್ಚಿತ್ತು; ಗುಡುಗು ಸಿಡಿಲುಗಳೆಲ್ಲ**
**ಸ್ತಬ್ಧವಾಗಿ, ಬಿಕ್ಕು ಉಕ್ಕುಕ್ಕಿ ತುಟಿ**
**ಬಿರಿದು, ತಣ್ಣಗಾಗಿತ್ತು ಎಲ್ಲ**
**ಪುಟುಪುಟು ಓಡಾಡುವ ನರ್ಸುಗಳು....**

...........................................................................

**ಉಸ್ತಾದರ ಹಾಡು ನಮ್ಮ ಕಿವಿಯಲ್ಲಿ**
**ರಾಗ ದುಂಬಿಯ ಹಾಗೆ ಹಾರುತ್ತ**
**ಹಾರುತ್ತ ಹೊರಟಿತ್ತು ದಿಕ್ಕು ಹಿಡಿದು**
**ಎಲ್ಲರಿಗೂ ಒಂದೇ ನ್ಯಾಯ, ಒಂದೇ**
**ನಿಯಮ, ಅವನು ಯಮಧರ್ಮ–**

**ಕಾಲ ನೇಮಿ, ಒಂದು ಗಳಿಗೆಯೂ**
**ಆಗುವುದಿಲ್ಲ ಅತ್ತಿತ್ತ ಹೊತ್ತೆಂದರೆ**
**ಹೊತ್ತು....' ಎನ್ನುತ್ತಿದ್ದರು ಉಸ್ತಾದರು**
**ಎಲ್ಲಿರಬಹುದು ಅವನು, ಕಾಲ ಹಿಡಿದವನು**
**ರಾಗಕ್ಕೊ, ಅದರ ಗುಂಗಿಗೊ ತಡಕಾಡುತ್ತಿದ್ದರು**
**ಉಸ್ತಾದರು, ಕೈಕೊಟ್ಟ ಸ್ವರ, ಕೈಬಿಟ್ಟ ತಾಳ**
**ಎಷ್ಟು ತಾಳಿಯಾನು ಯಮಧರ್ಮರಾಯ!.**

ಒಬ್ಬ ಸಂಗೀತಗಾರನ ಕುರಿತಾಗಿರುವ ಈ ಕವಿತೆ, ಸಂಗೀತಗಾರನ ಮನಸ್ಸು ಯಾವತ್ತೂ ಸಂಗೀತ ಕಚೇರಿಯ ಗುಂಗು, ಆಸ್ಪತ್ರೆಯಲ್ಲಿ ರೋಗಿಯಾಗಿ ಮಲಗಿದರೂ ಅದೇ ಗುಂಗಿನಲ್ಲಿದ್ದಾಗ ಅವನು ಬಯಸುವ ಹಂಬಲ ಈ ಕವಿತೆಯಲ್ಲಿ ವ್ಯಕ್ತವಾಗುತ್ತದೆ. ಮತ್ತೊಂದೆಡೆ ಜಾತಸ್ಯ ಮರಣಂ ಧ್ರುವಂ ಎನ್ನುವ ಮಾತಿನಂತೆ ಹುಟ್ಟಿದವ ಕೊನೆಗೊಮ್ಮೆ ಮರಣವನ್ನಪ್ಪಲೇಬೇಕು ಎಂಬ ತಾತ್ವಿಕತೆ ಈ ಕವಿತೆಯಲ್ಲಿ ಅಡಗಿದೆ. ಕವಿಯು ಯಮಧರ್ಮ ಎನ್ನುವ ಪಾತ್ರವನ್ನು ರೂಪಕವಾಗಿ ಬಳಸಿಕೊಂಡಿದ್ದಾನೆ. ಯಮಧರ್ಮ ಎಲ್ಲರ ಸಾವನ್ನು ಒಯ್ಯುವಾಗ ಶ್ರೀಮಂತ, ಬಡವ, ಸಂಗೀತಗಾರ, ರೈತ, ಕಾರ್ಮಿಕ, ದೊಡ್ಡ ಅಧಿಕಾರಿ ಎಲ್ಲರಿಗೂ ಒಂದೇ ಎನ್ನುವ ಸಂದೇಶ ಈ ಕವಿತೆಯಲ್ಲಿದೆ.

ಬ್ಲಾಗುಗಳ ಶೀರ್ಷಿಕೆಯ ಕೆಳಗಿನ ಟ್ಯಾಗ್ ಲೈನ್: ಕೆಲವು ಬ್ಲಾಗುಗಳು ಶೀರ್ಷಿಕೆಯ ಕೆಳಗೆ ಚಿಕ್ಕದಾದ ಅಕ್ಷರದಲ್ಲಿ ಟ್ಯಾಗ್‌ಲೈನ್‌ನ್ನು ಹಾಕಿರುತ್ತವೆ. ಇವುಗಳನ್ನು ನೋಡಿದವರು ಆಕರ್ಷಿತರಾಗಿ ಆ ಬ್ಲಾಗಿನಲ್ಲಿರುವ ವಿಷಯವನ್ನು ಗಮನಿಸುವಂತೆ ಪ್ರೇರೇಪಿಸುತ್ತವೆ. ಅವುಗಳಲ್ಲಿ ಕೆಲವನ್ನು ಗಮನಿಸುವುದಾದರೆ, ಕೆಂಡ ಸಂಪಿಗೆಗೆ–ಕನ್ನಡದ ಬೆಡಗು ಪರಿಮಳ, ಸಂಪದ–ಹೊಸ ಚಿಗುರು ಹಳೆ ಬೇರು, ಅವಧಿ–ಇದು ಕನಸುಗಳ ಬೆಂಬತ್ತಿದ ನಡಿಗೆ, ಸಂಗಾತಿ–ಸಾರ್ಥಕ ಬದುಕಿಗೆ ಸಾಹಿತ್ಯ ಸಂಗಾತಿ, ನಿಲುಮೆ–ಎಲ್ಲ ತತ್ವದ ಎಲ್ಲೆಮೀರಿ, ಚಿಲುಮೆ–ಕನ್ನಡ ನಲ್ಬರಹ ತಾಣ ಹೀಗೆ ಆಕರ್ಷಣೀಯವಾದ ಟ್ಯಾಗಲೈನ್ ಮೂಲಕ ಓದುಗನನ್ನು ಗಮನ ಸೆಳೆಯುತ್ತವೆ.

ಫೇಸ್‌ಬುಕ್ ಸಾಹಿತ್ಯ: ಪ್ರಪಂಚದಲ್ಲಿ ಅತಿ ಹೆಚ್ಚು ಜನರ ಬಳಕೆಯಲ್ಲಿರುವ ಜಾಲತಾಣಗಳಲ್ಲಿ ಇದು ಒಂದು. ಇಲ್ಲಿ ಸಾಮಾಜಿಕ ಮತ್ತು ವೈಯಕ್ತಿಕ ಸಂಗತಿಗಳು ಸಾಮಾಜಿಕ ಜಾಲತಾಣಕ್ಕೆ ರವಾನಿಸುವ ಪ್ರಕ್ರಿಯೆಯಾಗಿದೆ. ಗಜಲ್, ಕವಿತೆ, ಪುಟ್ಟಕಥೆ, ಹನಿಗವನಗಳು ಅಲ್ಲದೆ ವೇದಿಕೆ ಕಾರ್ಯಕ್ರಮಗಳನ್ನು ಲೈವ್ ಆಗಿ ಬಿತ್ತರಿಸುವ ಅವಕಾಶವಿದೆ. ಫೇಸ್‌ಬುಕ್‌ನಲ್ಲಿ ಬಿತ್ತರವಾದ ಒಂದು ಅನುವಾದಿತ ಕವಿತೆ

**ಸ್ವಲ್ಪ ಕೇಳಿಸ್ಕೋ**
**ಇಲ್ಲಿ ಹೆಣ್ಣಾಗುವುದು ಅಷ್ಟು ಸುಲಭವಲ್ಲ..**
**ನೀನೊಮ್ಮೆ ಹೆಣ್ಣಾಗಿ ಬದುಕುವೆಯಾ..?**
**ನಾನು ರಾಮನಾಗುವೆ..**
**ನೀನು ನನ್ನ ಸೀತೆಯಾಗುವೆಯಾ..?**
**ನಾನು ನನ್ನ ಮರ್ಯಾದೆಯನ್ನು ಆರಿಸಿಕೊಳ್ಳುವೆ**
**ನೀನು ಅಗ್ನಿ ಪರೀಕ್ಷೆ ಎದುರಿಸುವೆಯಾ..?**
**ನಾನು ಕೃಷ್ಣನಾಗುವೆ..**
**ನೀನು ನನ್ನ ರಾಧೆಯಾಗುವೆಯ..?**
**ಆಗ ನಾನು ನನ್ನ ಕರ್ತವ್ಯವನ್ನೇ ಮುಖ್ಯ ಎನ್ನುವೆ**
**ನೀನು ಕೃಷ್ಣನಿಂದ ದೂರಾಗಿ ವಿರಹ ಸಹಿಸುವೆಯಾ..?**
**ನಾನು ಶಿವನಾಗುವೆ..**

**ನೀನು ಶಕ್ತಿಯಾಗುವೆಯಾ..?**
**ಶಿವನಾಗಿ ನಾನು ತಪಗೈಯುವೆ..**
**ನೀನು ನನ್ನ ಶಕ್ತಿಯಾಗಿ ಬೆಂಕಿಯಲ್ಲಿ ಬೇಯುವೆಯಾ..?**
**ನಾನು ಗಂಡಾಗುವೆ..**
**ನೀ ನನ್ನ ಹೆಣ್ಣಾಗುವೆಯಾ..?**
**ಗಂಡಾಗಿ ನಾನು ನನ್ನನ್ನೇ ಆಯ್ಕೆ ಮಾಡಿಕೊಳ್ಳುವೆ**
**ನೀನು ಹೆಣ್ಣಾಗಿ ಬೆನ್ನ ಹಿಂದಿದ್ದು ನನಗಾಗಿ ಹೋರಾಡುವೆಯಾ..?**
**ಹೇಳು..**
**ಹೆಣ್ಣಾಗುವುದು ಅಷ್ಟು ಸುಲಭವಲ್ಲ..**
**ನೀನೊಮ್ಮೆ ಹೆಣ್ಣಾಗುವೆಯಾ..**
**–ರಚನೆ: ಅನಾಮಿಕ, ಕನ್ನಡಕ್ಕೆ: ಮಂಜುಳ ಕಿರುಗಾವಲು**

ಈ ಕವಿತೆಯಲ್ಲಿ ಬರುವ ರಾಮ, ಕೃಷ್ಣ, ಶಿವ, ಸೀತೆ, ರಾಧೆ, ಶಕ್ತಿ ಎನ್ನುವ ರೂಪಕಗಳ ಮೂಲಕ ಗಂಡು ಹೆಣ್ಣಿನ ನಡುವೆ ಇರುವ ಅಂತರ ಮತ್ತು ಮಿತಿಗಳನ್ನು ಕುರಿತು ಹೇಳುತ್ತದೆ. ಶರಣರ ವಚನದ ಛಾಯೆ ಈ ಕವಿತೆಯಲ್ಲಿದೆ. ಜೇಡರ ದಾಸಿಮಯ್ಯ ತನ್ನದೊಂದು ವಚನದಲ್ಲಿ ಒಡಲುಗೊಂಡವ ಹಸಿವ, ಒಡಲುಗೊಂಡವ ಹುಸಿವ, ಒಡಲುಗೊಂಡವನೆಂದು ನೀನೆನ್ನ ಜಡಿದೊಮ್ಮೆ ನುಡಿಯದಿರ, ನೀನೆನ್ನಂತೆ ಒಮ್ಮೆ ಒಡಲುಗೊಂಡು ನೋಡಾ ರಾಮನಾಥ॥ ಎನ್ನುವಲ್ಲಿ ಸ್ವತಃ ಅನುಭವಕ್ಕೆ ಬರದೆ ಯಾವ ಸಂಗತಿಗಳು ಅರ್ಥವಾಗುವುದಿಲ್ಲ ಎನ್ನುವ ತಾತ್ವಿಕತೆ ಈ ಕವಿತೆ ಮತ್ತು ವಚನದಲ್ಲಿ ಅಡಕವಾಗಿದೆ. ಹಸಿವಿನ ಸಂಕಟ, ಹೆಣ್ಣಾಗಿರುವ ಸಂಕಟ ಎರಡೂ ಒಂದೇಯಾಗಿ ಧ್ವನಿಸುತ್ತದೆ.

ವಾಟ್ಸಾಪ್: ಈ ವೇದಿಕೆಯಲ್ಲಿ ಪುಸ್ತಕ ಕುರಿತು ಚಿಕ್ಕ ಬರಹ, ಪುಟ್ಟಕಥೆ, ಸುತ್ತೋಲೆ, ಪ್ರಕಟಣೆ, ವೈಯಕ್ತಿಕ ಮಾಹಿತಿ, ಸಾಮಾಜಿಕ ಸಂಗತಿಗಳು, ಕವಿತೆ ಮುಂತಾದವುಗಳನ್ನು ಇಲ್ಲಿ ಗಮನಿಸುತ್ತೇವೆ. ಇಂತಹವುಗಳಲ್ಲಿ ಸಾಹಿತ್ಯಿಕವಾಗಿ ಬರುವ ಒಂದು ಪುಟ್ಟಕಥೆ: 3209. ರಚನೆ: ಸುಧಾ.ಜಿ.

**"ಗುರುವಿಗ್ಯಾಕಷ್ಟು ಬೆಲೆ ಕೊಡಬೇಕಜ್ಜಿ?" ಮಕ್ಕಳ ಪ್ರಶ್ನೆ**
**"ಮೋಬೈಲ್‌ಗ್ಯಾಕೆ ಅಷ್ಟೊಂದು ಬೆಲೆ?"**
**"ಎಷ್ಟೊಂದು ಮಾಹಿತಿ ಸಿಗುತ್ತೆ.."**
**"ಮಾಹಿತಿಗೇ ಅಷ್ಟು ಬೆಲೆಯಾದ್ರೆ ಮಾಹಿತಿಯ ಜೊತೆ ಬದುಕುವ,**
**ದಾರಿ ತೋರುವ ಗುರುವಿಗೆಷ್ಟು ಬೆಲೆಯಿರಬೇಕಲ್ಲವೇ.."? ಒಪ್ಪಿದರವರು!**

ಈ ಪುಟ್ಟಕಥೆಯಲ್ಲಿ ಎರಡೇ ಪಾತ್ರಗಳು ಮಾತನಾಡುತ್ತವೆ. ಟೈಪಿಸಿದ್ದು ಮೊಬೈಲ್ ಸ್ಕ್ರೀನ್‌ನಲ್ಲಿ ಬರೀ ಒಂಬತ್ತು ಸಾಲುಗಳು. ಇದರಲ್ಲಿ ಅತ್ಯುತ್ತಮವಾದ ನೈತಿಕ ಪಾಠವಡಗಿದೆ.

ಸಾಮಾಜಿಕ ಜಾಲತಾಣಗಳಲ್ಲಿ ಕೆಲವು ಸಂಸ್ಥೆಗಳು ಸೃಜನಶೀಲ ಸ್ಪರ್ಧೆಗಳನ್ನು ಆಯೋಜಿಸುತ್ತವೆ. ಈಗ ಇದೇ 14ನೆಯ ಫೆಬ್ರುವರಿ 2026ರ ಪ್ರೇಮಿಗಳ ದಿನಾಚರಣೆ ಅಂಗವಾಗಿ ಪ್ರಜಾವಾಣಿಯು ವ್ಯಾಲಂಟೈನ್ಸ್ ಡೇ ರೀಲ್ಸ್ ಸ್ಪರ್ಧೆಯನ್ನು ಏರ್ಪಡಿಸುತ್ತಿದೆ. ಸಾಮಾಜಿಕ ಜಾಲತಾಣವಾದ ಫೇಸ್‌ಬುಕ್ ಪುಟದಲ್ಲಿ ಇಂತಹ ಜಾಹೀರಾತು ಪ್ರಕಟಿಸಿದೆ. ಈ ಸ್ಪರ್ಧೆ ಪ್ರೀತಿ, ಸ್ನೇಹ, ನಂಬಿಕೆ, ಸಂಬಂಧಗಳ ಮೌಲ್ಯ ಹಾಗೂ ಜೀವನದ ಸೌಂದರ್ಯವನ್ನು ಪ್ರತಿಬಿಂಬಿಸುವ ಸೃಜನಾತ್ಮಕ ರೀಲ್ಸ್‌ಗಳನ್ನು ಆಹ್ವಾನಿಸಿದೆ. ಈ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ನಗದು ಬಹುಮಾನವನ್ನು ಪ್ರಜಾವಾಣಿಯು ಘೋಷಣೆ ಮಾಡಿದೆ.

ಹೀಗೆ ಸಾಮಾಜಿಕ ಜಾಲತಾಣಗಳು ಅನೇಕ ಹೊಸ ಹೊಸ ಸಾಧ್ಯತೆಗಳನ್ನು ಸೃಜಿಸಿದೆ.

ಅದು ಡಿಜಿಟಲ್ ರೂಪದಲ್ಲಿರುವುದರಿಂದ ಮಾನವನ ಸೃಜನಶೀಲತೆಗೆ ಮತ್ತಷ್ಟು ಪುಷ್ಟಿಯನ್ನು ಒದಗಿಸಿದೆ. ಈ ಸಾಮಾಜಿಕ ಜಾಲತಾಣಗಳನ್ನು ಧನಾತ್ಮಕವಾಗಿ ಮತ್ತು ನೇತ್ಯಾತ್ಮಕವಾಗಿ ಬಳಸಿಕೊಂಡಾಗ ಮಾತ್ರ ಈ ತಾಂತ್ರಿಕತೆಯ ಆವಿಷ್ಕಾರ ಸಫಲವಾಗುತ್ತದೆ. 'ಭಾರತದ ಅಟಾರ್ನಿ ಜನರಲ್ ಹೇಳುವಂತೆ ಸಾಮಾಜಿಕ ಜಾಲತಾಣಗಳು ಮುಕ್ತ ಅಭಿವ್ಯಕ್ತಿ ಸಾಧನಾ ಪರಿಕರಗಳಾಗಿವೆ. ಆದರೆ ಮನುಷ್ಯ ಪ್ರವೃತ್ತಿಯ ಉಪಯೋಗವನ್ನು ಇನ್ನೂ ಗುರುತಿಸಬೇಕಿದೆ. ನೈತಿಕತೆ ನೇಪಥ್ಯಕ್ಕೆ ಸರಿದಿರುವ ಈ ಸಂದರ್ಭದಲ್ಲಿ ನ್ಯಾಯಿಕ ಸಂಸ್ಥೆಗಳು ಮತ್ತು ಪೊಲೀಸ್ ಪ್ರಭುತ್ವ ಮಾತ್ರ ನಮ್ಮ ಮುಂದಿರುವ ಅಂತಿಮ ನಿಯಂತ್ರಕ ಆಯ್ಕೆಗಳಾಗಿವೆಯೇ! ಈ ಕುರಿತು ನಾವು ಚಿಂತಿಸಬೇಕಿದೆ. ನಮಗೆ ವಿಜ್ಞಾನದಲ್ಲಿರುವ ಹಾಗೆ ಯಾವುದೇ ಸಿದ್ಧಾಂತಗಳಿಲ್ಲ, ಗಣಿತದಲ್ಲಿರುವಂತೆ ಪ್ರಮೇಯಗಳಿಲ್ಲ. ಪ್ರತಿಯೊಬ್ಬ ವ್ಯಕ್ತಿಯು ತನ್ನ ಸ್ವಂತ ಭಾವನೆಗಳಿಗೆ ಅನುಗುಣವಾಗಿ ತನ್ನ ಸಮಾಜದ ಪರಿಕಲ್ಪನೆಯನ್ನು ಕಲ್ಪಿಸಿಕೊಳ್ಳುತ್ತಾನೆ ಇಂತಹ ಪರಿಕಲ್ಪನೆಗಳ ಸಾಮುದಾಯಕ ಪ್ರಯತ್ನದ ಆಧಾರದ ಮೇಲೆ ನಮ್ಮ ಮುಂದಿನ ಸಮಾಜವನ್ನು ನಿರ್ಮಾಣಗೊಳಿಸಬೇಕಿದೆ'. ಕೊನೆಯದಾಗಿ ಸಾಮಾಜಿಕ ಜಾಲತಾಣಗಳು ರಚನಾತ್ಮಕ ನೆಲೆಯಲ್ಲಿ ಬಳಸಿಕೊಂಡಲ್ಲಿ ಭವಿಷ್ಯದಲ್ಲಿ ಉತ್ತಮ ಸಮಾಜವನ್ನು ಕಟ್ಟಬಹುದಾಗಿದೆ ಎಂಬುದೇ ಈ ಲೇಖನದ ಆಶಯವಾಗಿದೆ.

**ಪರಾಮರ್ಶನ ಗ್ರಂಥಗಳು:**

1. https://education.cfr.org/learn/reading/what-colonialism-and-how-did-it-arise
2. Avadhi Blog ಜಿ.ಪಿ.ಬಸವರಾಜು ಕವಿತೆ

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.